ಪಂಚಪರಮೇಷ್ಠಿ ಪದವು ವ್ಯವಹಾರ ನಯದಿಂದ ತಿಳಿದುಕೊಳ್ಳಲು ಯೋಗ್ಯವಿದೆಯೆಂದು ಹೇಳಿದೆ, ಆದರೆ ಪಂಚಪರಮೇಷ್ಠಿಯ ಆಶ್ರಯದಿಂದ ಪರಮೇಷ್ಠೀ ಪದವನ್ನು ಪಡೆಯುವ ಸಾಧ್ಯತೆಯಿಲ್ಲ. ಒಂದು ಸಮಯದಲ್ಲಿ ಅಭೇದ ಪರಿಪೂರ್ಣ ಪ್ರಭುವಿನ ದೃಷ್ಟಿಯಾದರೆ, ಅವನ ಜ್ಞಾನವಾದರೆ, ಆ ಶ್ರದ್ಧೆ-ಜ್ಞಾನಗಳು ಪರಮೇಷ್ಠೀಪದದ ಪ್ರಾಪ್ತಿಯ ಕಾರಣವಾಗುವವು, ಆದರೆ ವ್ಯವಹಾರ ರತ್ನತ್ರಯವು ಮಾತ್ರ ಮುಕ್ತಿಯ ಕಾರಣವಾಗುವುದಿಲ್ಲವೆಂದು ಹೇಳಲಾಗಿದೆ.

ಗೃಹಸ್ಥರು ಕೂಡ ಮೋಕ್ಷಮಾರ್ಗದಲ್ಲಿ ಗಮನ ಮಾಡಬಹುದಾಗಿದೆಯೆಂದು ಈಗ ಹೇಳುತ್ತಾರೆ, -

**ಗಿಹಿ-ವಾವಾರ ಪರಿಟ್ಠಿಯಾ ಹೇಯಾಹೇಉ ಮುಣಂತಿ**

**ಅಣುದಿಣು ಝಾಯಹಿ ದೇಉ ಜಿಣು ಲಹು ಣಿವ್ವಾಣು ಲಹಂತಿ ॥18॥**

**ಮನೆ ಕಾರ್ಯಗಳ ನಡೆಸಿದರು ಹೇಯಾಹೇಯಗಳ ತಿಳಿದವನು**

**ಅನುದಿನ ಧೇನಿಸೆ ಜಿನವರನ ಪಡೆವನು ನಿರ್ವಾಣವ ಬೇಗ ॥18॥**

**ಅರ್ಥ :-** ಯಾರು ಮನೆ ಕೆಲಸದಲ್ಲಿ ತೊಡಗಿದ್ದಾರೆ ಮತ್ತು ಹೇಯ-ಉಪಾದೇಯಗಳನ್ನು ಎಂದರೆ ತ್ಯಾಗ ಮಾಡಲು ಯೋಗ್ಯ ಹಾಗೂ ಗ್ರಹಣ ಮಾಡಲು ಯೋಗ್ಯವಾದವುಗಳನ್ನು ತಿಳಿಯುತ್ತಾರೆ ಅಲ್ಲದೆ ಹಗಲಿರುಳು ಜಿನೇಂದ್ರ ದೇವರ ಧ್ಯಾನ ಮಾಡುತ್ತಾರೆ ಅವರು ಕೂಡ ಶೀಘ್ರವಾಗಿ ನಿರ್ವಾಣ ಪಡೆಯುತ್ತಾರೆ.

ಗೃಹಸ್ಥಾಶ್ರಮದಲ್ಲಿ ಕೂಡ ಆತ್ಮಾನುಭವವು ಆಗುತ್ತದೆ, ಮನೆಯಲ್ಲಿ ಇರುತ್ತಿದ್ದರು ಕೂಡ ಮೋಕ್ಷಮಾರ್ಗದ ಮೇಲೆ ನಡೆಯುತ್ತಾರೆಂದು ಶ್ರೀ ಯೋಗಿಂದುದೇವರು ಹೇಳುತ್ತಾರೆ. ಮುನಿರಾಜರುಗಳು ಉಗ್ರ ಪುರುಷಾರ್ಥದಿಂದ ಶೀಘ್ರವಾಗಿ ಮೋಕ್ಷದ ಉತ್ಕೃಷ್ಟ ಸಾಧನೆ ಮಾಡುತ್ತಾರೆ. ಗೃಹಸ್ಥಾವಸ್ಥೆಯಲ್ಲಿರುವ ಸಮ್ಯಕ್‌ದೃಷ್ಟಿಗಳು ತಮ್ಮ ಯೋಗ್ಯ ಸಾಧನೆ ಮಾಡುತ್ತಾರೆ, ಅವರ ಪುರುಷಾರ್ಥವು ಮಂದವಾಗಿರುತ್ತದೆ. ಅವರ ಜ್ಞಾನದಲ್ಲಿ ಕೂಡ ಪ್ರತಿಕ್ಷಣಕ್ಕೆ ರಾಗದ ಹೇಯತೆಯು ವರ್ತಿಸುತ್ತಿರುತ್ತದೆ. ಅವರು ಉದ್ಯೋಗದಲ್ಲಿದ್ದರು ಕೂಡ ಅವರಿಗೆ ಪ್ರತಿಯೊಂದು ಕ್ಷಣದಲ್ಲಿ ರಾಗಾದಿಯ ಭಾವಗಳು ಹೇಯವಿವೆ, ಪರವಸ್ತುವಿನ, ಶರೀರ ಮೊದಲಾದವುಗಳ ಕ್ರಿಯೆಯ ಕರ್ತೃವು ನಾನಲ್ಲವೆಂಬ ಜ್ಞಾನವು ವರ್ತಿಸುತ್ತಿರುತ್ತದೆ ಮತ್ತು ಅವರಿಗೆ ವ್ಯಾಪಾರೋದ್ಯೋಗದ ಭಾವ; ಪೂಜಾ-ಭಕ್ತಿಯ ಭಾವಗಳು ಕೂಡ ಹೇಯವೆನಿಸುತ್ತವೆ.

ಪುಣ್ಯ-ಪಾಪದ ಭಾವಗಳಿರಲಿ ಅಥವಾ ದೇಹಾದಿಗಳ ಕ್ರಿಯೆಗಳಿರಲಿ ಇವೆಲ್ಲವನ್ನು ಸಮ್ಯಕ್‌ದೃಷ್ಟಿ ಜೀವನು ಹೇಯವೆಂದು ತಿಳಿಯುತ್ತಾನೆ. ಶುದ್ಧ ಚೈತನ್ಯ ಪರಮಾನಂದದ ಮೂರ್ತಿಯಾದ ಪ್ರಭು ಆತ್ಮನೊಬ್ಬನೇ ನನಗೆ ಆದರಣೀಯನಿದ್ದಾನೆ ಮತ್ತು ಧ್ಯಾನ ಮಾಡಲು ಯೋಗ್ಯನಿದ್ದಾನೆಂದು ಗೃಹಸ್ಥಾವಸ್ಥೆಯಲ್ಲಿಯೂ ವರ್ತನೆ ಮಾಡುವಂಥವನಿಗೆ ಮೋಕ್ಷಮಾರ್ಗದಲ್ಲಿ ಗಮನವಾಗದೆ ಇರುತ್ತದೆಯೇನು !

ಆತ್ಮನು ಸ್ವಯಂ ನಿರ್ವಾಣಸ್ವರೂಪನಿದ್ದಾನೆ-ಮೋಕ್ಷಸ್ವರೂಪನಿದ್ದಾನೆ. ಮತ್ತು ಅವನ ಸಾಧನನು ಸ್ವಯಂ ಆತ್ಮನಿದ್ದಾನೆ. ಒಂದು ಸಮಯದ ವಿಕಾರವಿದ್ದು ಅದು ಹೇಯವಿದೆ, ಅದನ್ನು ತ್ಯಾಗಮಾಡಿ ಅನಂತ ಗುಣಗಳ ಅಖಂಡ ಪಿಂಡನಾದ ಪೂರ್ಣಾನಂದದ ಪ್ರಭುವು ಉಪಾದೇಯನಿದ್ದಾನೆ. ಎಂದ ಮೇಲೆ ಗೃಹಸ್ಥ ಅವಸ್ಥೆಯಲ್ಲಿ ಈ ಕಾರ್ಯವು ಏಕೆ ಆಗುವುದಿಲ್ಲ ? ಎಂದರೆ ಅವಶ್ಯವಾಗಿ ಆಗುತ್ತದೆಯೆಂಬ ಭಾವವು.

ಆತ್ಮನು ಸ್ವಯಂ ಅನಂತ ಜ್ಞಾನ-ಆನಂದ ಮೊದಲಾದ ಗುಣಗಳ ಪಿಂಡನಿದ್ದಾನೆ. ಅವನನ್ನೇಕೆ ಉಪಾದೇಯ ಮಾಡಲಾಗುವುದಿಲ್ಲ ? ಗೃಹಸ್ಥಾವಸ್ಥೆಯಲ್ಲಿ ಆತ್ಮನಿದ್ದಾನೆಯೋ ಅಥವಾ ಇಲ್ಲವೋ ? ಆತ್ಮನು ಇದ್ದರೆ ಅವನನ್ನು

ಉಪಾದೇಯವನ್ನಾಗಿ ಏಕೆ ಮಾಡಲಾಗುವುದಿಲ್ಲ ? ಆತ್ಮನಿದ್ದಾನೆ, ಅವನು ಸ್ವಯಂ ಶುದ್ಧ ಸ್ವಭಾವವನ್ನು ಧರಿಸಿ ನಿಂತುಕೊಂಡಿದ್ದಾನೆ. ಪರಮಾತ್ಮನ ಸ್ವರೂಪದಲ್ಲಿ ಮತ್ತು ಆತ್ಮನ ಸ್ವರೂಪದಲ್ಲಿ ಯಾವುದೇ ಅಂತರವಿಲ್ಲ. ಹೀಗೆ ತನ್ನ ಸ್ವರೂಪವಿದೆಯೆಂದ ಮೇಲೆ ಅದನ್ನು ಉಪಾದೇಯವನ್ನಾಗಿ ಏಕೆ ಮಾಡಬಾರದು ? ಅವಶ್ಯವಾಗಿ ಮಾಡಬಹುದಾಗಿದೆ. ಅನ್ನ ಸಾಧನವು ಕೂಡ ತನ್ನಲ್ಲಿಯೇ ಇದೆ, ಬಾಹ್ಯ ಕ್ರಿಯೆಗಳಲ್ಲಿ ಇಲ್ಲ.

ರಾಗ ಮೊದಲಾದುವಂತೂ ಭಿನ್ನವಿವೆ, ಅವು ನಿನ್ನೊಳಗೆ ಇಲ್ಲ, ಯಾವವು ನಿನ್ನಲ್ಲಿ ಇಲ್ಲ ಅವು ನಿನಗೆ ಸಾಧನ ಹೇಗಾಗಬಲ್ಲವು ? ಆದುದರಿಂದ ರಾಗಾದಿಗಳೇನು ನಿನ್ನ ಸಾಧನವಿಲ್ಲ, ಯಾವವು ನಿನ್ನಲ್ಲಿ ಇವೆ ಅವು ನಿನಗೆ ಸಾಧನವಿವೆ. ವ್ಯಾಪಾರ ಮೊದಲಾದವುಗಳಿರಲಿ ಅಥವಾ ರಾಗಾದಿಗಳಿರಲಿ ಅವೆಲ್ಲವು ಅವುಗಳಲ್ಲೇ ಇವೆ. ಆತ್ಮನು ಆತ್ಮನಲ್ಲಿದ್ದಾನೆ. 'ನಾನಂತೂ ಶುದ್ಧಪರಮಾತ್ಮನೇ ಇದ್ದೇನೆಂ'ದು, ಮನ್ನಿಸುವುದರ ಹೆಸರೇ ಉಪಾದೇಯತನವಿದೆ. ಆ ವೀತರಾಗನ ಸ್ವರೂಪದಲ್ಲಿ ಮತ್ತು ನನ್ನ ಸ್ವರೂಪದಲ್ಲಿ ನಿಜವಾಗಿ ಯಾವುದೇ ಅಂತರವಿಲ್ಲವೆಂದು ಅಂತರ್ಯದಲ್ಲಿ ರುಚಿ ಮಾಡಿ ದೃಷ್ಟಿ ಮಾಡಿ 'ನಾನೇ ಆತ್ಮನಿದ್ದೇನೆಂ'ದು, ತನ್ನ ಆತ್ಮನನ್ನು ಸ್ವೀಕಾರ ಮಾಡುವುದು ಇದು ಗೃಹಸ್ಥಾವಸ್ಥೆಯಲ್ಲಿ ಕೂಡ ಆಗುವ ಸಾಧ್ಯತೆಯಿದೆ.

ವಸ್ತುವು ಶುದ್ಧವಿದ್ದು ಅದರ ಸ್ವಭಾವದ ಸಾಧನಗಳಾದ ಜ್ಞಾನ-ಶ್ರದ್ಧೆ-ಆಚರಣೆಗಳು ಕೂಡ ಶುದ್ಧವಿವೆ. ಇವು ಕೂಡ ತನ್ನ ಸ್ವಭಾವದೊಳಗಿಂದಲೇ ಬರುತ್ತವೆ; ಅವೇನು ದೂರದಿಂದ, ರಾಗದೊಳಗಿಂದ, ಪರದೊಳಗಿಂದ ಬರುವುದಿಲ್ಲ, ಆದುದರಿಂದ ಗೃಹಸ್ಥಾವಸ್ಥೆಯಲ್ಲಿ ಆತ್ಮನಿಗೆ ಮೋಕ್ಷಮಾರ್ಗವು ಪ್ರಾರಂಭವಾಗುತ್ತದೆ.

'ವಸ್ತುವು ಸ್ವಯಂ ಇದೆ ಮತ್ತು ಇದುವೇ ಬೆಲೆಯುಳ್ಳ ವಸ್ತುವಿದೆ, ಅಲ್ಪಜ್ಞತೆ, ರಾಗ ಅಥವಾ ಪರವಸ್ತುಗಳಾವವೂ ನನ್ನ ದೃಷ್ಟಿಯಲ್ಲಿ ಬೆಲೆಯುಳ್ಳವುಗಳಿಲ್ಲ'ವೆಂದು ದೃಷ್ಟಿಯಲ್ಲಿ ವಸ್ತುವನ್ನು ಉಪಾದೇಯರೂಪದಿಂದ ಗ್ರಹಣ ಮಾಡಬೇಕಾಗುವುದು.

ಭಗವಾನ ಆತ್ಮನು ಸ್ವಯಂ ಪರಮಾನಂದ ಸ್ವರೂಪದ ರತ್ನನಿದ್ದಾನೆಂದು ದೃಷ್ಟಿಯಲ್ಲಿ ಆದರವು ಬಂದರೆ ಸ್ವಭಾವದ ಸಾಧನವು ಕೂಡ ತಾನೇ ಇದ್ದಾನೆ ಮತ್ತು ಅದರಲ್ಲಿ ಏಕಾಗ್ರವಾಗುತ್ತಿದ್ದಂತೆಯೇ ಪ್ರಕಟವಾಗುವ ಸಾಧಕ ದಶೆಯು ಕೂಡ ತನ್ನ ಸಮೀಪದಲ್ಲಿಯೇ ಇದೆ ಎಂದರೆ ತನ್ನಲ್ಲಿಯೇ ಇದೆ.

ಉದ್ಯೋಗದ ಭಾವವಂತೂ ಹೇಯವಿದೆ, ಆದರೆ ಆ ಕಾಲದಲ್ಲಿ ಕೂಡ ಅದು ಜೀವ ಶಕ್ತಿಯ ಸತ್ವವಿದೆ ! ಆದುದರಿಂದ ಗೃಹಸ್ಥನು ಶುಭಾಶುಭ ಭಾವವನ್ನು ಹೇಯವೆಂದು ತಿಳಿದುಕೊಂಡು, ಅನಂತ ಗುಣಗಳ ಪಿಂಡನಾದ ನಿಜಾತ್ಮನನ್ನು ಉಪಾದೇಯವೆಂದು ತಿಳಿದುಕೊಳ್ಳಬೇಕು. ಮಹಾನುಭಾವನೇ ! ನೀನು ಸ್ವಯಂ ಇದ್ದು ಕೂಡ ನಿನ್ನ ಕಾರ್ಯವನ್ನು ಮಾಡುವುದಿಲ್ಲವೆಂದರೆ ಇದರ ಅರ್ಥವೇನು ? ನೀನು ಇರುವೆಯೆಂದ ಮೇಲೆ ನಿನ್ನ ಕಾರ್ಯವನ್ನು ಅವಶ್ಯವಾಗಿ ಮಾಡಬಹುದಾಗಿದೆ. ಗೃಹಸ್ಥಾವಸ್ಥೆಯಲ್ಲಿ ಹೇಯ-ಉಪಾದೇಯದ ವಿವೇಕವು ಅವಶ್ಯವಾಗಿ ಆಗುತ್ತದೆ. ಮೊದಲು ಶಾಸ್ತ್ರಾಭ್ಯಾಸದಿಂದ, ಗುರುಗಮದಿಂದ ಅನಂತರ ತೀವ್ರತರವಾದ ಜಿಜ್ಞಾಸೆಯಿಂದ ಹೇಯ-ಉಪಾದೇಯದ ಜ್ಞಾನ ಮಾಡಿಕೊಳ್ಳಬೇಕು. ಅನಂತರ ಅನಂತ ಗುಣಸ್ವರೂಪನಾದ ಭಗವಾನ ಆತ್ಮನು ಸ್ವಯಂ ನಾನಿದ್ದೇನೆಂದು ಇವನ ದೃಷ್ಟಿಯಲ್ಲಿ ಬಂದು ಬಿಡುವುದು.

ಗೃಹಸ್ಥಾಶ್ರಮದಲ್ಲಿ ವ್ಯಾಪಾರಾದಿಗಳ ಸಮಯದೊಳಗೆ ಆತ್ಮನು ಎಲ್ಲಿ ಹೊರಟು ಹೋಗಿರುತ್ತಾನೇನು ? ಇಲ್ಲವೆಂದರೆ ಈ ಆತ್ಮನನ್ನು ಉಪಾದೇಯರೂಪವಾಗಿ ಜ್ಞಾನ-ಶ್ರದ್ಧೆಗಳಲ್ಲಿ ಗ್ರಹಣ ಮಾಡಬೇಕು ಮತ್ತು ರಾಗಾದಿಗಳನ್ನು ಹೇಯವಾಗಿ ತಿಳಿದುಕೊಳ್ಳಬೇಕು. ಆ ರಾಗಾದಿಗಳನ್ನು ಹೇಯರೂಪವಾಗಿ ತಿಳಿಯುತ್ತಿರುವಂತೆಯೇ ವ್ಯಾಪಾರ ಮೊದಲಾದವುಗಳ ರಸವು -ರುಚಿಯು ಉಳಿಯುವುದಿಲ್ಲ, ಅದು ಸ್ವಯಂ ಹೊರಟುಹೋಗುತ್ತದೆ.

ಶರೀರ, ವಾಣಿ ಮತ್ತು ಮನಸ್ಸಿನ ಕ್ರಿಯೆಗಳು ಆಗುವ ಸಮಯದಲ್ಲಿ ಆಗುತ್ತವೆ, ಅವೇನು ಚೈತನ್ಯದ ಸತ್ವದಲ್ಲಿ ಇಲ್ಲ ಮತ್ತು ಚೈತನ್ಯವು ಅವುಗಳ ಕರ್ತೃವಿಲ್ಲವೆಂಬ ಜ್ಞಾನವು ಗೃಹಸ್ಥಾಶ್ರಮದಲ್ಲಿ ಆಗುವ ಸಾಧ್ಯತೆಯಿದೆ.

ಉದ್ಯೋಗದಲ್ಲಿ ರಸವು ಉಳಿಯದಿದ್ದರೆ ಹಣ ಹೇಗೆ ಸಂಪಾದಿಸುವುದು ? ಉದ್ಯೋಗದಲ್ಲಿ ರಸವಿರುವುದರಿಂದಲೇ, ಹಣ ಸಂಪಾದಿಸುತ್ತಾನೆ ಅಥವಾ ಪುಣ್ಯದಿಂದ ಹಣ ಸಂಪಾದಿಸುತ್ತಾನೆ ? ಪುಣ್ಯವಿದ್ದರೆ ಹಣ ಸಿಗುತ್ತದೆ. ಇಲ್ಲಿಯಂತೂ ಎರಡು ಮಾತುಗಳನ್ನು ಹೇಳುತ್ತಾರೆ. ಒಂದು ಸ್ವಯಂ ನೀನು ಮತ್ತು ಇನ್ನೊಂದು ನಿನ್ನಿಂದ ವಿರುದ್ಧವಾದ ವಿಕಾರ ಭಾವವು ಎಂದರೆ ವ್ಯಾಪಾರಾದಿಗಳ ಪರಿಣಾಮಗಳು ಇವು ದುಃಖರೂಪವಿವೆ, ಹೇಯವಿವೆ, ಆದರಿಸಲು ಯೋಗ್ಯವಿಲ್ಲವೆಂದು ಜ್ಞಾನ ಮಾಡಿಕೊಳ್ಳಬೇಕಾಗುವುದು. ವಿಕಾರೀ ಭಾವಗಳಿಂದ ಭಿನ್ನ ತ್ರಿಕಾಲಿ ಜ್ಞಾಯಕ ಮೂರ್ತಿ ಚಿದಾನಂದ ಶುದ್ಧ ಆತ್ಮನ ಆದರವನ್ನು ಅಂತರ್ಮುಖವಾಗಿ ಮಾಡಬೇಕಾಗುವುದು. ಇಷ್ಟಂತೂ ಗೃಹಸ್ಥಾಶ್ರಮದಲ್ಲಿ ಇದ್ದು ಕೂಡ ಆಗುವ ಸಾಧ್ಯತೆಯಿದೆ.

ಗೃಹಸ್ಥಾಶ್ರಮದಲ್ಲಿ ಕೂಡ ನೀನು ಪೃಥಕ್ ಜ್ಞಾಯಕ ತತ್ತ್ವನಿರುವೆ. ಅದರ ಸಾಧನದ ಮೂಲಕ ಸಂಸಾರದಿಂದ ಬಿಡುಗಡೆ ಹೊಂದುವ ಉಪಾಯವಾಗುತ್ತದೆ ಎಂದರೆ ಉದ್ಯೋಗ ಮೊದಲಾದವುಗಳ ಪರಿಣಾಮಗಳಲ್ಲಿ ಮತ್ತು ಬಾಹ್ಯ ಕ್ರಿಯೆಗಳಲ್ಲಿ ಇರುವುದರಿಂದ ಇದು ಆಗುವುದಿಲ್ಲವೆಂಬುದಾಗಿಲ್ಲ, ಆದರೆ ಪಾಮರನಾಗಿ ಇವನು ತನ್ನ ಮಹಿಮೆಯನ್ನು ಎಂದೂ ಮಾಡಲಿಲ್ಲ. ವಸ್ತು ಅಪೇಕ್ಷೆಯಿಂದ ನೀನು ಜಿನೇಂದ್ರ ಸ್ವರೂಪನೇ ಇರುವೆ. ಆದರೆ ತನ್ನಲ್ಲಿ ಇರುವುದನ್ನು ದೃಷ್ಟಿಯಲ್ಲಿ-ಶ್ರದ್ಧೆಯಲ್ಲಿ ತಂದುಕೊಳ್ಳದೆ-ಸ್ವಯಂ ಮಹಿಮಾವಂತವಾದ ವಸ್ತುವಿದ್ದರೂ ಕೂಡ ಅದನ್ನು ಮರೆತು ಕೀಳುಭಾವ ಮಾಡಿದರೆ ಶ್ರೀಗುರುಗಳೇನು ಮಾಡುವರು ? ಅಜ್ಞಾನ ಮಾಡುವಲ್ಲಿ ಕೂಡ ಜೀವನು ಸ್ವತಂತ್ರನಿದ್ದಾನೆ. ತನ್ನ ಜ್ಞಾನಾನಂದ ಮೂರ್ತಿಯಾದ ವಸ್ತುವನ್ನು ಅಂತರ್ಯದಲ್ಲಿ ಸ್ವೀಕಾರ ಮಾಡಿದ ಮೇಲೆ ಉತ್ಪನ್ನವಾಗುವಂಥ ವಿಕಲ್ಪಗಳು ಇವನ ಸ್ವರೂಪದಲ್ಲಿ ಇಲ್ಲದಿರುವುದರಿಂದ ಅವನ್ನು ಹೇಯವೆಂದು ತಿಳಿದು ಗೃಹಸ್ಥಾಶ್ರಮದಲ್ಲಿ ಕೂಡ ಹೇಯೋಪಾದೇಯದಜ್ಞಾನ ಮಾಡಿಕೊಳ್ಳಬಹುದಾಗಿದೆ.

'ಸಿದ್ಧ ಸಮಾನ ಸದಾ ಪದ ಮೇರೋ' ನಿನ್ನ ಆತ್ಮ ತತ್ತ್ವವು ಸಿದ್ಧ ಸಮಾನವಿದೆ, ಆದರೆ ನಿನಗೆ ಇದರ ಪರವೆಯಿಲ್ಲ ಮತ್ತು ನನಗೆ ಧರ್ಮ ಮಾಡುವುದಿದೆಯೆಂದು ಹೇಳುತ್ತಿರುವೆ, ಆದರೆ ಧರ್ಮವು ಎಲ್ಲಿಂದ ಆಗುವುದು. 'ಧರ್ಮ ಮಾಡುವಂಥ ಧರ್ಮಾತ್ಮನು ಮಹಾನ ಪದಾರ್ಥನಿದ್ದಾನೆಂದು ಉಪಾದೇಯ ಬುದ್ಧಿ ಮಾಡಿದರೆ ಗೃಹಸ್ಥಾಶ್ರಮದಲ್ಲೂ ಧರ್ಮವಾಗುವುದು ಎಂದರೆ ಆತ್ಮನು ವ್ಯಾಪಾರ ಮೊದಲಾದವುಗಳ ಭಾವರೂಪವಾಗಿ ಪರಿಣಮಿಸುತ್ತಿದ್ದರೂ ಅಥವಾ ಬಾಹ್ಯಕ್ರಿಯೆಗಳಲ್ಲಿ ನಿಮಿತ್ತ ರೂಪದಿಂದ ಉಪಸ್ಥಿತನಿರುವಂತೆ ಕಂಡು ಬರುತ್ತಿದ್ದರೂ ಅವನ್ನು ಹೇಯವೆಂದು ತಿಳಿದುಕೊಂಡು ತನ್ನ ಶುದ್ಧ ಆತ್ಮನನ್ನು ಉಪಾದೇಯವೆಂದು ತಿಳಿದುಕೊಂಡು ಅಂತರ್ಯದ ಆನಂದದಲ್ಲಿ ಇರಬಹುದಾಗಿದೆ. ಗೃಹಸ್ಥಾಶ್ರಮದಲ್ಲಿ ಕೂಡ ಅಂತರ್ಯದೊಳಗೆ ಆನಂದ ಸ್ವರೂಪನಾದ ಆತ್ಮನ ಸ್ವೀಕಾರ ಮಾಡುವ ಸಾಧ್ಯತೆಯಿದೆ ಮತ್ತು ರಾಗವನ್ನು ಹೇಯ ಮಾಡುವ ಸಾಧ್ಯತೆಯಿದೆ. ಆದರಂತೆ ಯಾವುದೇ ಸಮಯದಲ್ಲಿ ಆನಂದದ ಅನುಭವದಲ್ಲಿ ವರ್ತಿಸಬಹುದಾಗಿದೆ, ಆದರೆ ಅಜ್ಞಾನಿಗೆ ತನ್ನ ಆತ್ಮನು ಹೇಗಿದ್ದಾನೆಂಬುದರ ಅರಿವೇ ಇಲ್ಲದಾಗಿದೆ.

ದೃಷ್ಟಿಯಲ್ಲಿ ಪೂರ್ಣ ಆತ್ಮನ ಸ್ವೀಕಾರವಾಗುತ್ತಿದ್ದಂತೆಯೇ ಪರಮೇಶ್ವರನ ಸ್ವೀಕಾರವಾಗಿ ಹೋಗುವುದು ಮತ್ತು ಹೇಯವಿರುವಂಥ ರಾಗಾದಿಗಳ ತ್ಯಾಗವು ದೃಷ್ಟಿಯಲ್ಲಿ ಆಗಿ ಹೋಗುವುದು. ಧನ ಮೊದಲಾದವುಗಳಿಂದ ಲಾಭವಿದೆಯೆಂದು ಮನ್ನಿಸುವವನಿಗೆ ಸ್ವಭಾವದ ಸ್ವೀಕಾರವು ಹೇಗಾಗುವ ಸಾಧ್ಯತೆಯಿದೆ ? ಒಂದು ಕಡೆಗೆ ಹಣದ ಮಮತೆಯ ಭಾವವಿದ್ದರೆ ಇನ್ನೊಂದು ಕಡೆಗೆ ಸಮತೆಯ ಪಿಂಡವಾದ ಸ್ವಭಾವವಿದೆ. ಮಮತೆಯ ಸಮಯದಲ್ಲಿ ಕೂಡ ಸಮತೆಯ ಪಿಂಡನಾದ ಪ್ರಭು ಆತ್ಮನು ಎಲ್ಲಿಯೂ ಹೊರಟು ಹೋಗುವುದಿಲ್ಲ; ಆದರೆ ಸಮತೆಯ ಪಿಂಡದ ಸ್ವೀಕಾರ ಮತ್ತು ಮಮತೆಯ ಅಸ್ವೀಕಾರವಾದರೆ ಗೃಹಸ್ಥಾಶ್ರಮದಲ್ಲಿ ಕೂಡ ಧರ್ಮವಾಗುವ ಸಾಧ್ಯತೆಯಿದೆ.

ಹಗಲಿರುಳು ಜಿನೇಂದ್ರದೇವರ ಧ್ಯಾನ ಮಾಡುತ್ತಾನೆ. ಜಿನೇಂದ್ರ ಎಂದರೆ ವೀತರಾಗ; ಅಂತರ್ಯದಲ್ಲಿ ವೀತರಾಗತೆಯ ಹುಚ್ಚು ಹಿಡಿದಿರುತ್ತದೆ. ವೀತರಾಗಿ ಆತ್ಮ ಮತ್ತು ವೀತರಾಗ ದೇವರಲ್ಲಿ ಸ್ವಲ್ಪ ಕೂಡ ಅಂತರವಿಲ್ಲ. ಸಮ್ಯಕ್‌ದೃಷ್ಟಿಯು ಗೃಹಸ್ಥಾಶ್ರಮದಲ್ಲಿರಲಿ, ಉದ್ಯೋಗದಲ್ಲಿ ನಿರತನಾಗಿರಲಿ, ಸಾವಿರಾರು ರಾಣಿಯರ ಸಮೂಹದಲ್ಲಿ ಸೇರಿಕೊಂಡಿರಲಿ ಆದರೂ ಕೂಡ ಅವನಿಗೆ ಹಗಲಿರುಳು ವೀತರಾಗ-ವೀತರಾಗ, ಶುದ್ಧ-ಶುದ್ಧವಿರುವ ಆತ್ಮಸ್ವರೂಪವೇ ಆದರಣೀಯವಿರುತ್ತದೆ. ಸಮ್ಯಕ್‌ದೃಷ್ಟಿಗೆ ಅಶುದ್ಧತೆಯು ಆದರಣೀಯವಿರುವುದಿಲ್ಲ ಎಂದರೆ ಅವನಿಗೆ ಸಮ್ಯಗ್ದರ್ಶನ-ಜ್ಞಾನಗಳೇ ಇರುವುದಿಲ್ಲ. ಅವನು ಪರವನ್ನು ಪರರೂಪವಾಗಿ ಹೇಯರೂಪವಾಗಿ ತಿಳಿದುಕೊಂಡಲ್ಲದೆ ಉಪಾದೇಯ ರೂಪನಾದ ಚಿದಾನಂದ ಭಗವಾನ ಆತ್ಮನ ಜ್ಞಾನವು ಯಥಾರ್ಥವಾಗುವ ಸಾಧ್ಯತೆಯೇ ಇಲ್ಲ. ಆತ್ಮನನ್ನು ಉಪಾದೇಯರೂಪವಾಗಿ ತಿಳಿದುಕೊಂಡನೆನ್ನುವಲ್ಲಿ ಶುಭಾಶುಭ ಭಾವಗಳನ್ನು ಹೇಯರೂಪವಾಗಿ ಮನ್ನಿಸಿದನೆಂದು ಅರ್ಥವಾಗುತ್ತದೆ. ಶುಭಾಶುಭ ಭಾವಗಳುಲಾಭದ ಹೇತುವಿಲ್ಲ, ಆದರೆ ಹಾನಿಯ ಕಾರಣವೇ ಇವೆಯೆಂದು ಮನ್ನಿಸಿದನು.

ಮೋಕ್ಷದ ಸರ್ವದೇಶ ಸಾಧನವನ್ನು ಮುನಿಗಳೇ ಮಾಡುತ್ತಾರೆ, ಗೃಹಸ್ಥಾಶ್ರಮದಲ್ಲಿ ಏಕದೇಶ ಸಾಧನವಾಗುವ ಸಾಧ್ಯತೆಯಿದೆ. ಮುನಿ ಎಂದರೆ ಬಾಹ್ಯದಲ್ಲಿರುವುದನ್ನು ತ್ಯಾಗ ಮಾಡಿದವನು ಮುನಿಯೆಂದು ಅರ್ಥವಲ್ಲ, ಶುದ್ಧ ಚಿದಾನಂದ ರೂಪನಾದ ಆತ್ಮನ ಅನುಭವಪೂರ್ವಕವಾಗಿ ಅವನಲ್ಲಿ ಸ್ಥಿರವಿರುವವನು, ಪರಿಪೂರ್ಣ ಆನಂದವನ್ನು ಅನುಭವಿಸುವವನು ಅವನು ಮುನಿಯಿದ್ದಾನೆ. ಇಂಥ ಮುನಿಯು ಮೋಕ್ಷದ ಬಹು ಭಾಗದ ಸಾಧನೆ ಮಾಡುತ್ತಾನೆ ಎಂದರೆ ಉತ್ಕೃಷ್ಟ ಸಾಧನೆ ಮಾಡುತ್ತಾನೆ.

ದೃಷ್ಟಿಯಲ್ಲಿ ಓರ್ವ ಪೂರ್ಣಾನಂದದ ಅಧಿಪತಿಯಾದ ಚೈತನ್ಯ ಪ್ರಭುವಿನ ಸ್ವೀಕಾರವಾದರೆ ಅಲ್ಲಿ ಸಂಪೂರ್ಣ ಸಂಸಾರದ ಉದಯ ಭಾವದ ತ್ಯಾಗವು ದೃಷ್ಟಿಯಲ್ಲಿ ವರ್ತಿಸುತ್ತದೆ. ಎಲ್ಲಿ ಆತ್ಮನ ಆದರವಾಗುತ್ತದೆ ಅಲ್ಲಿ ಮಿಥ್ಯಾತ್ವದ ತ್ಯಾಗವಾಗಿ ಹೋಗುತ್ತದೆ ಎಂದರೆ ಅವನು ತ್ಯಾಗಿಯಾಗಿ ಬಿಡುವನು. ಇಂಥ ತ್ಯಾಗವಿಲ್ಲದೆ ಬಾಹ್ಯಕ್ರಿಯೆಗಳಿಗೆ ತ್ಯಾಗವೆಂದು ಮನ್ನಿಸುವಂಥವನು, ದಯೆ-ದಾನದ ಭಾವಗಳಿಂದ ಲಾಭವಾಗುತ್ತದೆಯೆಂದು ಮನ್ನಿಸುವಂಥವನು ಎಂದರೆ ಅಂಥ ತ್ಯಾಗಿಯು ತನ್ನ ಆತ್ಮನ ತ್ಯಾಗವನ್ನೇ ಮಾಡಿದ್ದಾನೆ. ಅವನು ರಾಗದ ತ್ಯಾಗ ಮಾಡಲಿಲ್ಲ, ಆದರೆ ಅವನು ತನ್ನ ಆತ್ಮನ ತ್ಯಾಗವನ್ನೇ ಮಾಡಿದನು. ಜ್ಞಾನಿಗಳಿಗಂತೂ ಯಾವ ಭಾವದಿಂದ ತೀರ್ಥಂಕರ ಪ್ರಕೃತಿಯ ಬಂಧವಾಗುತ್ತದೆ ಆ ರಾಗದ್ದು ಕೂಡ ತ್ಯಾಗವು ವರ್ತಿಸುತ್ತದೆ.

ಅಂತರ್ಯದಲ್ಲಿ ಪ್ರಭುವು ವಿರಾಜಿಸುತ್ತಾನೆ ಮತ್ತು ಅವನ ಸಾಧನವು ಕೂಡ ದೂರವಿಲ್ಲ, ಹತ್ತಿರದಲ್ಲೇ ಎಂದರೆ ಅಂತರ್ಯದಲ್ಲಿಯೇ ಇದೆ. ಆತ್ಮನಲ್ಲಿ ಏಕಾಗ್ರವಾಗುವುದು ಅದು ಅವನ ಸಾಧನವಿದೆ. ಇಂಥ ಸಾಧನವನ್ನು ಮತ್ತು ಸಾಧನದ ಧ್ಯೇಯವನ್ನು ತಿಳಿದುಕೊಳ್ಳದವನಿಗೆ ಇದು ಹೇಯ, ಇದು ಉಪಾದೇಯವೆಂದು ಜ್ಞಾನದಲ್ಲಿ ವರ್ತಿಸುವುದಿಲ್ಲ. ಇದರಿಂದಲೇ ಆತನ ದೃಷ್ಟಿಯಲ್ಲಿ ಆತ್ಮನ ತ್ಯಾಗವು ವರ್ತಿಸುತ್ತದೆ, ಆದರೆ ದೃಷ್ಟಿಯಲ್ಲಿ ರಾಗದ ತ್ಯಾಗವು ವರ್ತಿಸುವುದಿಲ್ಲ.

ಧರ್ಮಾತ್ಮ ಜೀವನು ಗೃಹಸ್ಥಾಶ್ರಮದಲ್ಲಿ ತೊಂಭತ್ತಾರು ಸಾವಿರ ರಾಣಿಯರ ಸಮೂಹದಲ್ಲಿ ಇರುತ್ತಿದ್ದರೂ ಕೂಡ ಅವನಿಗೆ ಭೋಗದ ಸಮಯದಲ್ಲಿ ಕೂಡ ದೃಷ್ಟಿಯಲ್ಲಿ ಅದರ ತ್ಯಾಗವು ವರ್ತಿಸುತ್ತದೆ. ನನ್ನ ಆನಂದವು ನನ್ನ ಹತ್ತಿರವೇ ಇದೆ; ಆದರೆ ಏನು ಮಾಡುವುದು ! ಸಮಾಧಾನವಾಗುವುದಿಲ್ಲ ಎಂದರೆ ಮಧ್ಯದಲ್ಲಿ ರಾಗವು ಬರುತ್ತದೆ. ಆದಾಗ್ಯೂ ಸಮ್ಯಕ್‌ದೃಷ್ಟಿಯು ಆ ಅಸ್ಥಿರತೆಯನ್ನು ಹೇಯವೆಂದು ತಿಳಿಯುತ್ತಾನೆ. ಈ ಅಸ್ಥಿರತೆಯ ರಾಗದ ನಂತರ ಎರಡನೇ ಕ್ಷಣದಲ್ಲಿಯೇ ಬಹುಶಃ ಧ್ಯಾನದಲ್ಲಿ ಅತೀಂದ್ರಿಯ ಆನಂದದ ಅನುಭವವನ್ನೂ ಮಾಡಿಕೊಳ್ಳುತ್ತಾನೆ. ವಾಸನೆಯ ವಿಕಲ್ಪದಲ್ಲಿ ಹೊರಟು ಹೋಗಿದ್ದರೂ ಕೂಡ ಅಂತರ್ಯದಲ್ಲಂತೂ ಸಚ್ಚಿದಾನಂದ ಪ್ರಭುವನ್ನು ದೃಷ್ಟಿಯೊಳಗಿಂದ ಬಿಟ್ಟುಕೊಡುವುದಿಲ್ಲ.

ಗೃಹಸ್ಥಾಶ್ರಮದಲ್ಲಿ ಕೂಡ ನಿಜ ಸ್ವರೂಪವು ಉಪಸ್ಥಿತವಿದೆ; ಆದಾಗ್ಯೂ ಅದನ್ನು ಆದರಣೀಯವನ್ನಾಗಿ ಏಕೆ ಮಾಡುವುದಿಲ್ಲವೆಂದರೆ ಅವನಿಗೆ ತನ್ನ ಸ್ವರೂಪದ ಮಹಿಮೆಯಿಲ್ಲ ಎಂದರೆ ವಿಕಾರದ ಪರದ ಮಹಿಮೆಯು ಅವನ ದೃಷ್ಟಿಯಲ್ಲಿ ಬಿದ್ದುಕೊಂಡಿದೆ. ಆದರಿಂದಾಗಿ ಮಿಥ್ಯಾತ್ವದಲ್ಲಿ ಮುಳುಗಿದ್ದಾನೆ. ಒಂದು ವೇಳೆ ಗೃಹಸ್ಥಾಶ್ರಮದಲ್ಲಿ ಇರುತ್ತಿದ್ದರೂ ತನ್ನ ಮಹಿಮೆಯು ಬಂದು ಬಿಟ್ಟರೆ, ಈ ಅಖಂಡಾನಂದದ ಪ್ರಭುವೇ ನನ್ನ ವಿಶ್ರಾಮಧಾಮನಿದ್ದಾನೆ, ಅವನ ರಸಾಸ್ವಾದ ಮಾಡುವುದೇ ನನ್ನ ಕರ್ತವ್ಯವಿದೆಯೆಂದು ಅಂತರ ದೃಷ್ಟಿಯಾದರೆ ಜ್ಞಾನಿಯು ಪೂಜೆ, ಭಕ್ತಿ ಮೊದಲಾದವುಗಳ ಭಾವಗಳನ್ನು ಕೂಡ ತ್ಯಾಗಬುದ್ಧಿಯಿಂದ ನೋಡುತ್ತಾನೆ.

ಪ್ರಭು ! ನೀನು ಇರುವೆಯೋ ಅಥವಾ ಇಲ್ಲವೋ ? ಇದ್ದರೆ ಅದೆಷ್ಟು ದೊಡ್ಡವನಿರುವೆ ?

**ಅನಂತ ಗುಣಗಳ ಸಾಗರನಿರುವೆ ಜ್ಞಾನ ಸ್ವರೂಪದಿ ತುಂಬಿರುವೆ ।**
**ನೀ ಆನಂದದ ಕಂದನು ಇರುವೆ ನೀ ವೀರ್ಯದ ಘನ ಪಿಂಡನಿರುವೆ ॥**

ನೀನು ಶಾಂತಿಯ ಸಮುದ್ರನಿರುವೆ, ಅನಂತ ಪುರುಷಾರ್ಥದ ವೀರ್ಯದಿಂದ ತುಂಬಿಕೊಂಡ ಪದಾರ್ಥನಿರುವೆ. ಸ್ವಚ್ಛತೆಯ ನಿಲಯನಿರುವೆ, ಅನಂತ ಗುಣಗಳೊಳಗಿಂದ ಪ್ರತಿಯೊಂದು ಗುಣದ ಪ್ರಭುತೆಯಿಂದ ತುಂಬಿಕೊಂಡ ಪ್ರಭು ಇರುವೆ. ಅನಂತ ಕಾಲದಿಂದ ಇಂಥ ಭಗವಂತನ ತ್ಯಾಗವು ವರ್ತಿಸುತ್ತಿತ್ತು. ಈಗ ಅವನಿಗೆ ಅವನ ಶ್ರದ್ಧೆ - ಜ್ಞಾನದಲ್ಲಿ ತನ್ನ ಗ್ರಹಣವಾಯಿತು, ಮತ್ತು ಅನಂತ ಕಾಲದಿಂದ ಯಾವ ರಾಗಾದಿ ಪುಣ್ಯ ಪರಿಣಾಮಗಳನ್ನು ಮಾಡಲು ಯೋಗ್ಯವೆಂದು ಮನ್ನಿಸಿ ಗ್ರಹಣ ಮಾಡಲಾಗಿತ್ತು ಅವುಗಳ ತ್ಯಾಗವಾಯಿತು.

ಸಮ್ಯಕ್‌ದೃಷ್ಟಿಯು ಯಾವಾಗಲೂ ಜಿನೇಂದ್ರದೇವರ ಧ್ಯಾನ ಮಾಡುತ್ತಾನೆ. ಅವನಿಗೆ ಆ ಸಮಯದಲ್ಲಿ ಕೂಡ ಆತ್ಮನ ಶ್ರದ್ಧೆ-ಜ್ಞಾನಗಳು ನಿರಂತರ ವರ್ತಿಸುತ್ತವೆ. ಗೃಹಸ್ಥಾಶ್ರಮದಲ್ಲಿದ್ದರೂ ಧರ್ಮಾತ್ಮನಿಗೆ ಹಗಲಿರುಳು ಭಗವಾನ ಆತ್ಮನ ಶುದ್ಧ ಜ್ಞಾನರೂಪವಾದ ಪರಿಣತಿಯು ಅಖಂಡ ವರ್ತಿಸುತ್ತದೆ. ಕೆಲವೊಮ್ಮೆ ನಿರ್ವಿಕಲ್ಪ ಧ್ಯಾನವು ಕೂಡ ಗೃಹಸ್ಥನಿಗೆ ಆಗುತ್ತದೆ.

ಸಮ್ಯಕ್‌ದೃಷ್ಟಿಗೆ ಸ್ವರೂಪವು ಶುದ್ಧವಿದೆಯೆಂಬ ಜ್ಞಾನವು ಅನುಭವಪೂರ್ವಕವಾಗಿದ್ದರೂ ಕೂಡ ಅವನು ಸಾಮಾಯಿಕದಲ್ಲಿ ಪ್ರಯೋಗ ಮಾಡುತ್ತಾನೆ. ನಾನು ಪರಮಾತ್ಮನಿದ್ದರೆ ಉಪಯೋಗವು ಇದರಲ್ಲಿ ಸ್ಥಿರವಿರುವ ಸಾಧ್ಯತೆಯಿದೆಯೋ ಅಥವಾ ಇಲ್ಲವೋ-ಎಂಬುದರ ಪರೀಕ್ಷೆ ಮಾಡುತ್ತಾನೆ. ದಿನಾಲು ಸಾಮಾಯಿಕದಲ್ಲಿ ಪ್ರಯೋಗ ಮಾಡುತ್ತಾನೆ. ಆತ್ಮನು ಅಂತರ್ಯದ ಸ್ವರೂಪದಲ್ಲಿ ಎಷ್ಟು ಇರುವ ಸಾಧ್ಯತೆಯಿದೆಯೆಂಬುದರ ಕುರಿತು ತಿಂಗಳು, ಹದಿನೈದು ದಿವಸ, ಇಪ್ಪತ್ತಾನ್ಲುಕ್ಕು ಗಂಟೆ ಪ್ರಯೋಗ ಮಾಡುತ್ತಾನೆ. ಈ ಪ್ರಯೋಗವನ್ನು ಪ್ರೋಷಧವೆಂದು ಹೇಳುತ್ತಾರೆ. ದೇಹ ತ್ಯಾಗದ ಸಮಯದಲ್ಲಿ ನಿರ್ವಿಕಲ್ಪತೆ ಎಷ್ಟಿರುವ ಸಾಧ್ಯತೆಯಿದೆ, ಭವದ ಅಭಾವದ ಸಮಯದಲ್ಲಿ ಭವದ ಅಭಾವ ಸ್ವರೂಪನಾದ ಭಗವಾನ ಆತ್ಮನಲ್ಲಿ ಸ್ಥಿರತೆಯು ಎಷ್ಟಿರುವ ಸಾಧ್ಯತೆಯಿದೆಯೆಂಬುದರ ಪ್ರಯೋಗ ಮಾಡುವುದಕ್ಕೆ ಸಮಾಧಿಮರಣವೆಂದು ಹೇಳುತ್ತಾರೆ. ಇದೆಲ್ಲವು ಗೃಹಸ್ಥಾಶ್ರಮದಲ್ಲಿ ಆಗುವ ಸಾಧ್ಯತೆಯಿದೆ.

ಈ ಪ್ರಕಾರ ಗೃಹಸ್ಥಾಶ್ರಮದಲ್ಲಿ ಇರುತ್ತಿದ್ದರೂ ಯಾವನು ಆತ್ಮನನ್ನು ಉಪಾದೇಯವೆಂದು ತಿಳಿಯುತ್ತಾನೆ ಮತ್ತು ರಾಗಾದಿಗಳನ್ನು ಹೇಯವಾಗಿ ತಿಳಿಯುತ್ತಾನೆ ಅವನು ಅಲ್ಪಕಾಲದಲ್ಲಿ ನಿರ್ವಾಣ ಪಡೆಯುತ್ತಾನೆ.

ಜಿನೇಂದ್ರದೇವರ ಸ್ಮರಣೆಯು ಅದು ಪರಮಪದದ ಕಾರಣವಿದೆಯೆಂದು ಈಗ ಹೇಳುತ್ತಾರೆ, -

ಜಿಣ ಸುಮಿರಹು ಜಿಣ ಚಿಂತಹು ಜಿಣ ಝಾಯಹು ಸುಮಣೇಣ
ಸೋ ಝಾಯಂತಹ ಪರಮ-ಪಉ ಲಬ್ಭಇ ಏಕ್ಕ-ಖಣೇಣ ॥19॥

**ಧ್ಯಾನಿಸು ಚಿಂತಿಸು ಜಿನವರನ ಸ್ಮರಿಯಿಸು ಚಿತ್ತದ ಶುದ್ಧಿಯಲಿ**
**ಧ್ಯಾನದಿ ಕ್ಷಣದಲಿ ದೊರಕುವುದು ಶಾಶ್ವತವಿರುವ ಪರಮಪದ ॥19॥**

**ಅರ್ಥ :-** ಶುದ್ಧ ಭಾವದಿಂದ ಜಿನೇಂದ್ರನ ಸ್ಮರಣೆ ಮಾಡು, ಜಿನೇಂದ್ರನ ಚಿಂತನೆ ಮಾಡು, ಜಿನೇಂದ್ರನ ಧ್ಯಾನ ಮಾಡು, ಹೀಗೆ ಧ್ಯಾನ ಮಾಡುವುದರಿಂದ ಒಂದು ಕ್ಷಣದಲ್ಲಿ ಪರಮಪದವು ಪ್ರಾಪ್ತವಾಗುವುದು.

ಎಲೈ ಆತ್ಮನೇ ! ವೀತರಾಗ ಪರಮೇಶ್ವರರಲ್ಲಿ ಮತ್ತು ನಿನ್ನ ಆತ್ಮನಲ್ಲಿ ಸ್ವಭಾವದಿಂದ ಯಾವ ಅಂತರವೂ ಇಲ್ಲ, ವರ್ತಮಾನ ಪರ್ಯಾಯದಲ್ಲಿ ಅಂತರವಿದೆ. ಭಗವಂತರ ದಶೆಯು ಪೂರ್ಣಾನಂದ ರೂಪವಾಗಿ ಹೋಗಿದೆ; ಮತ್ತು ನಿನ್ನ ದಶೆಯಲ್ಲಿ ರಾಗ ಹಾಗೂ ಮಲಿನತೆಯಿದೆ. ಆದರೆ ಆತ್ಮನ ಸ್ವಭಾವದಲ್ಲಿ ಹಾಗೂ ಭಗವಂತನ ಸ್ವಭಾವದಲ್ಲಿ ಯಾವ ಅಂತರವಿಲ್ಲ, ಆದುದರಿಂದ ಕೇವಲಜ್ಞಾನಿಗಳಾದ ಪರಮೇಶ್ವರರು ಆತ್ಮನನ್ನು ಹೇಗೆ ನೋಡಿದ್ದಾರೆ ಹಾಗೆಯೇ ಯಾವನ ಶ್ರದ್ಧೆ-ಜ್ಞಾನದಲ್ಲಿ ಆತ್ಮನು ನೆಲೆಸಿದ್ದಾನೆ ಆ ಧರ್ಮಾತ್ಮ ಜೀವನು ಸರಿಯಾಗಿ ಭಗವಾನ ಆತ್ಮನ ಸ್ಮರಣೆ ಮಾಡುತ್ತಾನೆಂದು ಇಲ್ಲಿ ಹೇಳುತ್ತಾರೆ. ಅವನು ರಾಗದ, ನಿಮಿತ್ತದ ಅಥವಾ ಸಂಯೋಗದ ಸ್ಮರಣೆ ಮಾಡುವುದಿಲ್ಲ. ಆದರೆ ನಿಜಾತ್ಮನ ಸ್ಮರಣೆಯನ್ನೇ ಮಾಡುತ್ತಾನೆ.

ಎಲೈ ಆತ್ಮನೇ ! ಶುದ್ಧ ಭಾವದಿಂದ ಜಿನೇಂದ್ರ ಭಗವಂತರ ಸ್ಮರಣೆ ಮಾಡು. ಜಿನೇಂದ್ರ ಎಂದರೆ ಆತ್ಮನು. ಭಗವಾನ ಆತ್ಮನ ಸ್ವಭಾವವು ವೀತರಾಗ, ಇಂದ್ರ-ಈಶ್ವರವಿದೆ, ಆದರೆ ತಾನು ತನ್ನನ್ನು ದರಿದ್ರನೆಂದು ಮನ್ನಿಸಿಕೊಂಡಿದ್ದಾನೆ. ಈತನಿಲ್ಲದೆ ನನ್ನದು ನಡೆಯುವುದಿಲ್ಲ, ಆತನಿಲ್ಲದೆ ನನ್ನದು ನಡೆಯುವುದಿಲ್ಲ, ಗೌರವಕ್ಕೆ ಎಲ್ಲಿಯಾದರೂ ಒಂದಿಷ್ಟು ಆಘಾತ ತಗಲಿದರೆ ಅಲ್ಲಿ ಏನೇನು ಆಗಿ ಹೋಗುತ್ತದೆ ಯಾರಿಗೆ ಗೊತ್ತು ! ಇಂಥ ಜೀವರುಗಳಿಗೆ ಸ್ವಭಾವದ ಮಾತು ಹೇಗೆ ತಿಳಿದು ಬರುವುದು ! ಭಗವಾನ ಸಚ್ಚಿದಾನಂದ ಪ್ರಭು ಜಿನೇಂದ್ರನಿದ್ದು ಅವನನ್ನು ರಾಗವುಳ್ಳವನೆಂದು ಮನ್ನಿಸುವುದು ಅದು ಮಹಾನ ಕಲಂಕವಿದೆ ರಾಯರೇ ! ತಿಳಿಯಿತೇನು !

ಸೋದರನೇ ! ಭಗವಾನ ಆತ್ಮನು ವೀತರಾಗ ಮೂರ್ತಿಯಾದ ಪ್ರಭು ಇದ್ದಾನೆ. ಶುದ್ಧ ಭಾವದಿಂದ ಅವನ ಚಿಂತನೆ ಮಾಡು. ರಾಗ, ದಯೆ-ದಾನ ಮೊದಲಾದವುಗಳ ವಿಕಲ್ಪಗಳೆಲ್ಲವು ಬಿಟ್ಟುಕೊಡುವಂಥವುಗಳಿವೆ, ಪುನಃ ಪುನಃ ಅವುಗಳ ಸ್ಮರಣೆಯನ್ನೇಕೆ ಮಾಡುತ್ತಿರುವೆ ? ಅವು ಬರುತ್ತವೆ ಬರಲಿ, ಆದರೆ ಅವುಗಳ ಸ್ಮರಣೆಯನ್ನೇಕೆ ಮಾಡುತ್ತಿರುವೆ. ಆತ್ಮನು ಪ್ರತ್ಯಕ್ಷ ವಸ್ತುರೂಪದಿಂದ ಜಿನೇಂದ್ರಪ್ರಭು ಇದ್ದಾನೆ. ಅವನ ದಶೆಯಲ್ಲಿ ಜಿನೇಂದ್ರತನವನ್ನು ಪ್ರಕಟ ಮಾಡುವ ಸಲುವಾಗಿ ಈ ಜಿನೇಂದ್ರ ಪ್ರಭುವಿನಲ್ಲಿ ಏಕಾಗ್ರನಾಗಿ ಧ್ಯಾನ ಮಾಡುವುದು ಇದು ಪ್ರಕಟ ಜಿನೇಂದ್ರನಾಗುವ ಉಪಾಯವಿದೆ.

ಅಹಹ ! ಮನೆಯ ಅಂಗಳದಲ್ಲಿ ಪರಮೇಶ್ವರ ಪ್ರಭು ಋಷಭನಾಥ ಮುನಿಗಳು ಬಂದಿರುವಾಗ ಅವರ ಆದರ ಮಾಡದಿರುವುದು ಮತ್ತು ರೋಗದಿಂದ ಕೊಳೆತು ಹೋದ ಶರೀರವುಳ್ಳ ಭಿಕ್ಷುಕನ ಆದರ ಮಾಡುವುದು. ಅದೇ ಪ್ರಕಾರ ಮೂರು ಲೋಕದ ಅಧಿಪತಿಯಾದ ಭಗವಂತನು ತನ್ನ ಹತ್ತಿರದಲ್ಲಿ ವಿರಾಜಿಸುತ್ತಿದ್ದರೂ ಅವನ ಆದರವನ್ನಂತೂ ಮಾಡುವುದಿಲ್ಲ ಮತ್ತು ಪುಣ್ಯ-ಪಾಪದ ಮಲಿನ ಭಿಕ್ಷುಕನಂತಿರುವ ವಿಕಾರದ, ಶರೀರ ಮೊದಲಾದವುಗಳ ಸತ್ಕಾರ ಮಾಡುತ್ತಾನೆ. ಆಶ್ಚರ್ಯದ ಸಂಗತಿಯಾಗಿದೆ.

ಜಿನರ ಸಮಾನ ಚೈತನ್ಯ ಪ್ರಭುವಾದ ಭಗವಾನ ಆತ್ಮನು ಉಪಾದೇಯನಿದ್ದಾನೆ ಮತ್ತು ರಾಗ ಮೊದಲಾದ ಮಾಲಿನ್ಯವು ಹೇಯವಿದೆಯೆಂದು ಯಾರಿಗೆ ಮೊದಲು ಸಮ್ಯಕ್ ಜ್ಞಾನದಲ್ಲಿ ವಿವೇಕವು ಪ್ರಕಟವಾಗಿದೆ ಅವರು ಜಿನೇಂದ್ರರ ಸ್ಮರಣೆ ಮಾಡುತ್ತಾರೆ. ನೀನು ಹೊರಗಿನ ಪ್ರಪಂಚದ ಸ್ಮರಣೆ ಮಾಡುತ್ತಿರುವೆ ಆದರ ಅಪೇಕ್ಷೆಯಿಂದ ಚಿದಾನಂದಪ್ರಭುವು ನಿನ್ನ ಹತ್ತಿರದಲ್ಲಿಯೇ ವಿರಾಜಿಸುತ್ತಿದ್ದಾನೆ ಅವನ ಸ್ಮರಣೆ ಮಾಡಬೇಕಯ್ಯ ! ಅವನ ಸ್ಮರಣೆ